AKSHARASURYA
Peer-Reviewed, Multi Lingual E-Journal
Volume – 02, Issue – 01, January 2023.

# ಕನ್ನಡ ಸಾಹಿತ್ಯ: ಕೃಷಿ

ಡಾ. ಅಶ್ವಿನಿ ಶಂ ಬೆಳ್ಳುಂಡಗಿ
ಕನ್ನಡ ಉಪನ್ಯಾಸಕರು
ಕೃಷಿ ಮಹಾವಿದ್ಯಾಲಯ ವಿಜಯಪುರ
ಮೊ: 8296628248
asbellundagi@gmail.com

ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿಗಳ ನಡುವಿನ ಸಂಬಂಧ ಸಂಕೀರ್ಣವಾದದ್ದು. ಚರಿತ್ರೆಯೊಳಗೆ ನಡೆಯುವ ಅನೇಕ ಸಾಂಸ್ಕೃತಿಕ ಚಲನೆಗಳಿಗೆ ಸ್ಪಂದಿಸುತ್ತ ವಿಶಿಷ್ಟ ರೀತಿಯಲ್ಲಿ ಕಾಣಿಸುವುದರಲ್ಲಿ ಸಾಹಿತ್ಯದ ಮಹತ್ವವಿದೆ. ಸಾಹಿತ್ಯ, ಸಂಸ್ಕೃತಿ ಮತ್ತು ಕೃಷಿಯನ್ನು ಬೇರೆ ಬೇರೆಯಾಗಿ ನೋಡಲು ಸಾಧ್ಯವೇ ಇಲ್ಲ. ಎಲ್ಲ ಸಂಸ್ಕೃತಿ ಮತ್ತು ನಾಗರಿಕತೆಯ ಮೂಲ ಸೆಲೆಯೆ ಕೃಷಿ. ಕೃಷಿ ಸಂಸ್ಕೃತಿಯೂ ಒಂದು ಸಂವೇದನೆಯಾಗಿ ಕನ್ನಡ ಸಾಹಿತ್ಯದಲ್ಲಿ ಒಳಗೊಂಡಿದೆ.

ಮನುಷ್ಯ ಹುಟ್ಟಿನಿಂದಲೆ ಕೃಷಿ ಹುಟ್ಟಿಕೊಂಡಿದೆ. ಅಲೆಮಾರಿಯಾಗಿದ ಮನುಷ್ಯ ಕೃಷಿಯಿಂದಾಗಿ ಸ್ಥಿರವಾಗಿ ನೆಲೆ ನಿಂತನು. ಕೃಷಿಗಾಗಿ ಕಾಡನ್ನು ಕಡೆದು ಬೆಳೆಯನ್ನು ಬೆಳೆಯಲು ಪ್ರಾರಂಭಿಸಿದನು. ಕೃಷಿಯು ಮಣ್ಣಿನಲ್ಲಿ ಬೆಳೆಯುವ ಒಂದು ಕಲೆಯಾಗಿದೆ. ಕೃಷಿಯು ಮಾನವನಿಗೆ ಹಂಚಿಕೊಂಡು ಬದುಕುವ ಹೃದಯವಂತಿಕೆಯನ್ನು ಕಲಿಸಿದೆ.

ಸಾಹಿತ್ಯ ಹುಟ್ಟಿದೆ ಕೃಷಿ ಮೂಲದಿಂದ. ಮನುಷ್ಯ ತನ್ನ ಭಾವನೆಗಳನ್ನು, ವಿಚಾರಗಳನ್ನು, ಅನುಭವಗಳನ್ನು ಕಥೆ, ಹಾಡುಗಳ ಮೂಲಕ ಒಬ್ಬರಿಂದೊಬ್ಬರಿಗೆ ಹೇಳುತ್ತಿದ್ದರು ಹೀಗೆ ಒಬ್ಬರಿಂದ ಒಬ್ಬರಿಗೆ, ಬಾಯಿಯಿಂದ ಬಾಯಿಗೆ ಹರಿದು ಬಂದ ಮೌಖಿಕ ಸಾಹಿತ್ಯವೇ ಜನಪದ ಸಾಹಿತ್ಯ. ಜನಪದರಿಗೆ ಹಾಡು ಬದುಕಿನ ಭಾಗ. ತಮ್ಮ ದಿನನಿತ್ಯದ ಎಲ್ಲ ಕೆಲಸಗಳ ಜೊತೆಗೆ ತಮ್ಮ ಪಾಡಿಗೆ ತಾವು ಹಾಡಿಕೊಂಡು ಇದವರು. ಹೊಲ ಉಳುವಾಗ, ಕೂರಿಗೆ ಹೊಡೆಯುವಾಗ, ಕಳೆ ಕೀಳುವಾಗ, ನಾಟಿ ಮಾಡುವಾಗ, ಪೈರು ಕೀಳುವಾಗ, ಬೀಸುವಾಗ, ಕುಟ್ಟುವಾಗ, ನೇಯುವಾಗ ಇತರ ಎಲ್ಲ ಕೆಲಸಗಳನ್ನು ಮಾಡುವಾಗ ಅವರಿಗೆ ಹಾಡುಗಳೇ ಸಂಗಾತಿ. ರೈತರು ಕೃಷಿ ಉಪಕರಣಗಳನ್ನು ಜಾನಪದದ ಮೂಲಕ ಕರೆಯುತ್ತಿದ್ದರು. ಭೂಮಿ ಬಿತ್ತನೆ ಮಾಡುವ ಸಂದರ್ಭದಲ್ಲಿ ಹಾಡು ಹಾಡು ಹಾಡುತ್ತಾ ತಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತಿದ್ದರು. ಕೃಷಿಕರು ಐಕ್ಯತೆಯಿಂದ ಬದುಕು ಕಟ್ಟಿಕೊಂಡಿದರು. ರಾಸಿ ಮಾಡುವ ಸಂದರ್ಭದಲ್ಲಿ ಕೂಡ ರೈತರು ಅಚ್ಚುಕಟ್ಟಾಗಿ ಸಾಹಿತ್ಯವನ್ನು ಜೋಡಣೆ ಮಾಡಿ ಹಾಡು ಕಟ್ಟಿ ಹಾಡುತ್ತಿದ್ದರು. ಕೃಷಿ ನಮ್ಮ ಸಾಹಿತ್ಯ ಮತ್ತು ಸಂಸ್ಕೃತಿಗೆ ತಾಯಿ ಬೇರು.

ಬೆಳಗಾಗಿ ನಾನೆದ್ದು ಯಾರ್ ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳಿಯೋ ಭೂಮಿತಾಯಿ
ಎದ್ದೊಂದು ಗಳಿಗೆ ನೆನೆದೇನು.

ರೈತಾಪಿ ಹೆಣ್ಣು ಮಕ್ಕಳ ಸುಪ್ರಭಾತವಿದು. ತಮ್ಮ ದಿನದ ಆರಂಭವನ್ನು ಭೂತಾಯಿಯನ್ನು ನೆನೆಯುವುದರ ಮೂಲಕ ಪ್ರಾರಂಭಿಸುತ್ತಾರೆ.

ಹಾಗಲ ಬಳ್ಳಿಗಿ ಹಂದರ ಹಾಕೀನಿ
ಗಿಂಡೀಲಿ ನೀರ ಸುರವೀನಿ ನನ್ನ ತಮ್ಮ
ಚಂದ್ರಮ ನಿನ್ನಬಳ್ಳಿ ಚಿಗಿಯಲಿ
ಹಸಗೂಸು ಹುಟ್ಟಲಿ ಹೊಸಪ್ಯಾಟಿ ಕಟ್ಟಲಿ
ರಸಬಾಳಿ ಕಬ್ಬು ಬೆಳೆಯಲಿ ನಮ್ಮೂರ
ಬಸವಣ್ಣನ ತೇರು ಯೆಳೆಯಲಿ

ಹೀಗೆ ಗರತಿ ಎಲ್ಲರ ಬಾಳು ಹಸನಾಗಲಿ, ಸದಾ ಹಸಿರಾಗಿರಲಿ ಎಂದು ಹಾರೈಸಿದ್ದಾಳೆ. ಜನಸಾಮಾನ್ಯರ ಅಭಿವ್ಯಕ್ತಿ ಕೃಷಿಯೊಂದಿಗೆ ಬೆಳೆದಿದೆ. ಕೃಷಿಯ ಎಲ್ಲ ಚಟುವಟಿಕೆಗಳು ಕಥೆ, ಪದ್ಯ, ಒಗಟು ಇತ್ಯಾದಿಗಳನ್ನು ಮೇಳೈಸಿ ಒಬ್ಬರಿಂದ ಒಬ್ಬರಿಗೆ ತಲೆಮಾರಿನಿಂದ ತಲೆಮಾರಿಗೆ ಹಸ್ತಾಂತರಿಸುತ್ತಿದ್ದರು.

ಪುರಾತನ ಕಾಲದಿಂದಲ್ಲೂ ಉತ್ತಿ ಬಿತ್ತಿ ಬೆಳೆಯುವುದು ಕೃಷಿಯಾಗಿದೆ. ವೇದಗಳ ಕಾಲದಿಂದಲೂ ಶಾಸ್ತ್ರಿಯ ಕೃತಿಗಳಲ್ಲಿ ಕೃಷಿ ಸಂಸ್ಕೃತಿಯ ಉಲ್ಲೇಖವಿದೆ. ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಶಾಸ್ತ್ರಸಾಹಿತ್ಯದ ಭಾಗವಾಗಿ ಆಗಮಿಕ, ಲೌಕಿಕಶಾಸ್ತ್ರಗಳು ರಚನೆ ಆಗಿರುವುದು ಕಂಡುಬರುತ್ತದೆ. ಧಾರ್ಮಿಕ ನೆಲೆಯಲ್ಲಿ ಆಗಮಿಕ, ಪಾರಮಾರ್ತಿಕ ನೆಲೆಯಲ್ಲಿ ಲೌಕಿಕ ಗ್ರಂಥಗಳು ರಚನೆಯಾಗಿವೆ. ಲೌಕಿಕ ಬದುಕಿಗೆ ಅಗತ್ಯವಾದ ಜ್ಞಾನ ಶಾಸ್ತ್ರ ಗ್ರಂಥಗಳಲ್ಲಿ ರಚನೆಯಾಗಿದೆ. ಜೋತಿಷ್ಯ, ವೈದ್ಯ, ಕಾಮಶಾಸ್ತ್ರ, ಅಶ್ವಶಾಸ್ತ್ರ, ಗಜಶಾಸ್ತ್ರ ಲಭ್ಯವಾಗಿವೆ.

ರಟ್ಟವಿಡಂಗ ರಚಿಸಿದ ರಟ್ಟಮತಶಾಸ್ತ್ರದ 4,5,6,9 ಹಾಗೂ 11 ನೆಯ ಅಧ್ಯಾಯಗಳಲ್ಲಿ, 2ನೆ ಚಾವುಂಡರಾಯ ಲೋಕೋಪಕಾರಂನ 3,4,5 ಹಾಗೂ 6 ನೇ ಅಧಿಕಾರದಲ್ಲಿ ಹಾಗೂ ಕೆಳದಿ ಬಸವರಸನ ಶಿವತತ್ವ ರತ್ನಾಕರದ 108 ತರಂಗಗಳಲ್ಲಿಯ 3500 ಸಾವಿರ ಶ್ಲೋಕಗಳಲ್ಲಿ ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ಪೂರಕವಾದ ಮಾಹಿತಿಯನ್ನು ಕಾಣುತ್ತೇವೆ. ಈ ಮೂರು ಗ್ರಂಥಗಳು ಪೋಷಕ ವರ್ಗಗಳಿಂದ ರಚಿತವಾಗಿವೆ. 'ಲೋಕೋಪಕಾರಂ' ಗ್ರಂಥವು ಸಂಸ್ಕೃತದ ಕವಿ ವರಾಹಮಿಹಿರನ ಬೃಹತ್ ಸಂಹಿತೆಯನ್ನು ಆಕರವಾಗಿಟ್ಟುಕೊಂಡು ರಚಿಸಲಾಗಿದೆ. ಇದೊಂದು ವಿಶ್ವಕೋಶ ಮಾದರಿಯ ಗ್ರಂಥವಾಗಿದೆ. ಆಕಾಶ, ಮಳೆ, ಗ್ರಹ, ನಕ್ಷತ್ರ, ಅಂತರ್‌ಜಲ, ಜಲಾಶಯಗಳು ಮುಂತಾದವುಗಳಲ್ಲದೆ ತೋಟಗಾರಿಕೆಯ ಬೆಳೆಗಳ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ.

ಸುದೀರ್ಘ ಇತಿಹಾಸವಿರುವ ಕನ್ನಡ ಸಾಹಿತ್ಯದಲ್ಲಿ ಕೃಷಿಗೆ ಸಂಬಂಧಿಸಿದ ಮಾಹಿತಿ ದೊರಕುವುದು ತೀರಾ ಕಡಿಮೆ. ಏಕೆಂದರೆ ಆಗಿನ ಸಂದರ್ಭದಲ್ಲಿ ಸಾಹಿತ್ಯವನ್ನು ರಚಿಸುವುದಕ್ಕೆ ಎಲ್ಲರಿಗೂ ಅವಕಾಶಗಳು ಲಭ್ಯವಿರಲಿಲ್ಲ ಕೇವಲ ಪಂಡಿತರಿಗೆ ಮಾತ್ರ ಅವಕಾಶವಿತು. ಅದು ರಾಜಾಶ್ರಯದಲ್ಲಿ ಇರಬೇಕಾಗುತ್ತಿತ್ತು. ಹಾಗಾಗಿ ಅವರೆಲ್ಲರ ಕಥಾ, ಕಾವ್ಯ ವಸ್ತು ಒಂದು ಧರ್ಮದ ಕುರಿತಾಗಿ ಇಲ್ಲವೆ ರಾಜನ ಕುರಿತಾಗಿ ಇರುತ್ತಿತ್ತು. ನಾಗಚಂದ್ರ, ಕುಮಾರವ್ಯಾಸ, ನಯನಸೇನ ಧರ್ಮಾಮೃತ ಕೃತಿಯಲ್ಲಿ ಕುಲಕಸುಬುಗಳ ಪ್ರಸ್ತಾಪ ಮಾಡಿರುವುದನು ಗಮನಿಸುವಂತದು. ಕ್ರಿ.ಶ 450 ರಿಂದ 1150ರ ವರೆಗಿನ ಕನ್ನಡದ ಶಾಸನಗಳನ್ನು ಅಧ್ಯಯನ ಮಾಡಿದ ಡಾ.ಎಂ.ಚಿದಾನಂದ ಮೂರ್ತಿವರು ಕೃಷಿ ಸಂಬಂಧಿತ ಪದಗಳು ಮತ್ತು ಕೃಷಿ ಚಟುವಟಿಕೆಗಳನ್ನು ಗುರ್ತಿಸಿದ್ದಾರೆ.

12 ನೇ ಶತಮಾನದಲ್ಲಿ ವಚನ ಸಾಹಿತ್ಯ ಪ್ರಾರಂಭವಾಯಿತು. ಇದು ಜನಸಾಮಾನ್ಯರ ಸಾಹಿತ್ಯವಾಗಿದೆ. ಎಲ್ಲ ವಚನಕಾರರು ರೈತಾಪಿ ವರ್ಗದವರಾಗಿದ್ದಾರೆ. ಬಸವಣ್ಣ, ಅಲ್ಲಮ ಪ್ರಭು, ಒಕ್ಕಲಿಗ ಮುದ್ದಣ, ಸಿದ್ಧರಾಮ, ಚೆನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದ ವಚನಕಾರರು ತಮ್ಮ ವಚನಗಳಲ್ಲಿ ಕೃಷಿ ಬಗ್ಗೆ ಉಲ್ಲೇಖಿಸಿದ್ದಾರೆ. ಬಸವಣ್ಣನವರು ತಮ್ಮ ಬೆಡಗಿನ ವಚನವೊಂದರಲ್ಲಿ ವ್ಯವಸಾಯದ ಪೂರ್ಣ ಆವರ್ತನ ಕ್ರಿಯೆಯನ್ನು ವಿವರಿಸಿದ್ದಾರೆ.

ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು
ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ಪರಸೇವೆಯನ್ನು ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು
ನಾನಾವ ಕರ್ಮಂಗಳ ಮಾಡಿದಡೆಯು
ಆ ಕರ್ಮಫಲ ಭೋಗವ ನೀ ಕೊಡುವೆ
ಎಂಬುದು ನಾನು ಬಲ್ಲೆನು
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು
ನಿಮ್ಮ ಸೊಮ್ಮಿಂಗೆ ಸಲಿಸುವೆನು ನಿಮ್ಮಾಣೆ ಕೂಡಲಸಂಗಮದೇವಾ.

ಆರಂಭವ ಎಂದರೆ ಕೃಷಿ. ಎಲ್ಲ ಕಾಯಕ ಮತ್ತು ಸಂಸ್ಕೃತಿ ತಾಯಿಯ ಸ್ಥಾನದಲ್ಲಿರುವುದೇ ಕೃಷಿ.

'ಮೇಟಿ ಕಿತ್ತಿತ್ತು, ಕಣ ಹಾಳಾಯಿತ್ತಯ್ಯಾ' ಇದರಲ್ಲಿ ಇಡೀ ಬದುಕಿನ ಆದಿ ಅಂತ್ಯವನ್ನು ವ್ಯವಸಾದ ಅವಧಿಗೆ ಅನ್ವಯಿಸಲಾಗಿದೆ.

ಬೆಳೆಯ ಭೂಮಿಯಲೊಂದು
ಪ್ರಳಯದ ಕಸಹುಟ್ಟಿ
ತಿಳಿಯಲೀಯದು ಎಚ್ಚರಲೀಯದು
ಎನ್ನವ ಗುಣವೆಂಬ ಕಸವಕಿತ್ತು
ಸಲಹಯ್ಯಾ ಲಿಂಗತಂದೆ
ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ

ಫಲವತ್ತಾದ ಭೂಮಿಯಲ್ಲಿ ಬೆಳೆ ಜೊತೆಗೆ ಕಸವೂ ಬೆಳೆಯುತ್ತಾದೆ. ಅದನ್ನು ಆಗಿಂದಾಗ ತೆಗೆದು ಹಾಕಬೇಕು. ಬೆಳೆಗೆ ಬೇಕಾದ ಪೋಷಕಾಂಶಗಳನ್ನು ಈ ಕಸವೂ ಹೀರಿಕೊಳ್ಳುವುದರಿಂದ ಬೆಳೆ ಸಮೃದ್ಧಿಯಾಗಿ ಬೆಳೆಯುವುದಿಲ್ಲ. ಹಾಗಾಗಿ ಕಳೆಯನ್ನು ತಗೆಯುವ ಕೆಲಸ ಆಗಬೇಕು. ಹಾಗಯೇ ನಮ್ಮ ಮನದ ಮೈಲಿಗೆಯನ್ನು ಶುಚಿ ಮಾಡಬೇಕು.

ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ
ಅಗೆದು ಕಳೆದನಯ್ಯಾ ಭ್ರಾಂತಿನ ಬೇರ
ಒಡೆದು ಸಂಸಾರದ ಹೇಂಟೆಯ
ಬಿಗಿದು ಬಿತ್ತಿದೆನಯ್ಯ ಬ್ರಹ್ಮ ಬೀಜವನ್ನು
ಅಖಂಡ ಮಂಡಲವೆಂಬ ಬಾವಿ ಪವನವೇ ರಾಟಾಳ
ಸುಷುಮ್ನನಾಳದಿಂದ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹವೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ
ಆವಾಗಳೂ ಈ ತೋಂಟದಲ್ಲಿ ಜಾಗರವಿದ್ದು
ಸಸಿಯ ಸಲುಹಿದೆನು ಕಾಣಾ ಗುಹೇಶ್ವರ (ಸಮಗ್ರ ವಚನ ಸಂಪುಟ 1 2016)

ಅಲ್ಲಮಪ್ರಭುಗಳು ಈ ವಚನದಲ್ಲಿ ಗ್ರಾಮೀಣ ಪರಿಸರದಲ್ಲಿ ಕೃಷಿಕರು ತಯಾರಿಸುವ ಕೃಷಿಗೆ ಉಪಯುಕ್ತವಾದ ಪರಿಕರಗಳನ್ನು ಉಲ್ಲೇಖಿಸಿದ್ದಾರೆ. ತನುವಿನ ಭ್ರಾಂತಿಯ ಬೇರನ್ನು ತೆಗೆಯಲು ಗುದ್ದಲಿಯನ್ನು ಉಪಯೋಗಿಸಿ ತೆಗೆದನು. ಎನ್ನುವಲ್ಲಿ ಕೃಷಿಯನ್ನು ದೇಹಕ್ಕೆ ಹೋಲಿಸಿ ದೈವತ್ವದ ಕಲ್ಪನೆ ನೀಡುವ ವಿಶಾಲ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಭೂಮಿ ತಾಯಿಯನ್ನು ಸಂಸಾರಕ್ಕೆ ಹೋಲಿಸುವುದರ ಮೂಲಕ ವ್ಯವಸಾಯದ ನೆಲವನ್ನು ಹರಗುವ ಬೀಜವನ್ನು ವೈಜ್ಞಾನಿಕವಾಗಿ ನಿರೂಪಿಸಲಾಗಿದೆ.

ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು.
ಕ್ರಿಯೆಗೆ ಅರಿವು ಬೇಕೆಂಬಲ್ಲಿ ಉಭಯವನರಿದು ಘಟಿಸಬೇಕು.
ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಮೀರಿದರುಂಟೆ?
ಕ್ರಿಯೆ ಬಿಡಲಿಲ್ಲ, ಅರಿವ ಮರೆಯಲಿಲ್ಲ.
ಬೆಳೆಯ ಕೊಯಿದ ಮತ್ತೆ, ಹೊಲಕ್ಕೆ ಕಾವಲುಂಟೆ?
ಫಲವು ಹೊತ್ತ ಪೈರಿನಂತೆ, ಪೈರನೊಳಗೊಂಡ ಫಲದಂತೆ,
ಅರಿವು ಆಚರಣೆಯೆಲ್ಲ ನಿಂದು,
ಕಾಮಭೀಮ ಜೀವಧನನೊಡೆಯನೆಂಬುವ ಭಾವಿಸಲಿಲ್ಲ.
–ಒಕ್ಕಲಿಗ ಮುದ್ದಣ್ಣ

ವಚನ ಸಾಹಿತ್ಯದ ನಂತರ ಬಂದ ಸಾಹಿತ್ಯವೇ ದಾಸ ಸಾಹಿತ್ಯ. ದಾಸ ಸಾಹಿತ್ಯದಲಂತೂ ಕೃಷಿ ಪ್ರಧಾನವಾಗಿದೆ. ಕನಕದಾಸರು ಕೃಷಿಗೆ ಸಂಬಂಧಿಸಿದ ಅದರಲ್ಲೂ ಒಂದು ಧಾನ್ಯವನ್ನು ಕುರಿತು ಒಂದು ಕೃತಿಯನ್ನು ಬರೆದಿದ್ದಾರೆ. ರಾಮಧಾನ್ಯ

**AKSHARASURYA**
Peer-Reviewed, Multi Lingual E-Journal
Volume – 02, Issue – 01, January 2023.

ಚರಿತ್ರೆ. ಇದರಲ್ಲಿ ರಾಗಿಯ ಬಗ್ಗೆ ಸುದೀರ್ಘ ವಿವರಣೆ ಅದರ ಮಹತ್ವವನ್ನು ವಿವರಿಸಿದ್ದಾರೆ. ರಾಗಿಯೊಂದಿಗೆ ಅಕ್ಕಿಯನ್ನು ಹೋಲಿಸಿದರೆ ರಾಗಿ ಶ್ರೇಷ್ಠ ಎಂಬ ವಿಷಯವನ್ನು ಸೊಗಸಾಗಿ ಚಿತ್ರಿಸಿದ್ದಾರೆ.

ತತ್ವ ಬೋಧನೆಗಾಗಿ ರಚಿತವಾದ ಹಾಡು ಅಥವಾ ಪದದ ರೂಪದಲ್ಲಿ ರಚಿತವಾಗಿರುವ ಸಾಹಿತ್ಯವೇ ತತ್ವಪದ ಸಾಹಿತ್ಯ. ಜಾನಪದ ಬದುಕಿನ ದಟ್ಟ ಪ್ರಭಾವ ಪ್ರೇರಣೆಯಿಂದ ಸರಳವಾಗಿ ಸಹಜ ಭಾಷೆಯೊಂದಿಗೆ ಸ್ಪಷ್ಟ ಸಂವಹನ ಲಕ್ಷಣಗಳನ್ನು ಹೊಂದಿರುವುದು. ತತ್ವಪದಕಾರರಲ್ಲಿ ಕೃಷಿ ಸಂವೇದನೆಯನ್ನು ಕಾಣುತ್ತೇವೆ.

ಸುಗ್ಗಿ ಮಾಡೋಣ ಬಾರವ್ವಾ ಗೆಳತಿ

ಏಳೆಂಟು ಅಕ್ಕಡಿಯ ಏಣಿಸಿ ನಮ್ಮ

ಬಾಳನು ಅದರೊಳು ದಣಿಸಿ

ಕಾಳಕೂಟ ವಿಷ ಎಣಿಸಿ ನಂಟಿನ

ಸೋಲಗಳೆಲ್ಲವ ಗಣಿಸಿ

ಬಾಳಿನ ರಾಗಿ ನವಣೆ ಸಜ್ಜೆಯ

ಓಲ್ಯಾಡುತ ಬಹುರಾಗದಿ ಕೊಯ್ಯುತ

ಪ್ರಸ್ತುತ ತತ್ವಪದವು ವ್ಯಕ್ತಿಯ ಬದುಕಿನ ಪಾಪ ಪುಣ್ಯ ಎಂಬ ಕಲ್ಪನೆಯ ಸುಕರ್ಮ ಕುಕರ್ಮಗಳನ್ನು ಅರಿಯುವ ಹಂತ. ವ್ಯಕ್ತಿಯ ಬದುಕಿನಲ್ಲಿ ಇರಬೇಕು. ಜೀವ ಮೋಹದ ನೆಲೆಯಲ್ಲಿ ಬೆಳೆದ ಫಲಗಳ ಸಹಜ ಸ್ವರೂಪವನ್ನು ಅರಿಯಲು ಬೆಳೆ, ಕೊಯ್ಲು, ಸುಗ್ಗಿ ಇತ್ಯಾದಿ ರೂಪಗಳಿಂದ ವಿವರಿಸುತ್ತಾ ಬದುಕು ಸಮೃದ್ಧವಾಗಿಯೂ, ಹಸನಾಗಿಯೂ ಇರಬೇಕೆಂದು ತಿಳಿಸುತ್ತದೆ.

ಸರ್ವಜ್ಞ ಕವಿ ಕೃಷಿ ಸಮಸ್ತ ಪ್ರಪಂಚದ ಕ್ರಿಯಾಶಕ್ತಿ, ಅದು ಇಲ್ಲದೆ ಹೋದರೆ ಜೀವ ಜಗತ್ತು ಅಂದಕಾರದಲ್ಲಿ ಮುಳುಗಿ, ಹಸಿವಿನಿಂದ ಬಳಲಬೇಕಾಗುತ್ತದೆ. ಕೈಗಾರಿಕೆಗಳು ರೋಗ ಗ್ರಸ್ತವಾಗುತ್ತವೆ ಎಂದು ಹೇಳಿ ಕೃಷಿಯ ಮಹತ್ವವನ್ನು ಸಾರಿದ್ದಾರೆ.

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು

ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ

ದಾಟವೇ ಕೆಡಗು ಸರ್ವಜ್ಞ

ಸರ್ವಜ್ಞ 'ಅನ್ನದೇವರ ಮುಂದೆ ಇನ್ನು ದೇವರು ಉಂಟೆ' ಎಂದು ಪ್ರಶ್ನಿಸಿದ್ದಾರೆ.

ನವೋದಯ ಸಾಹಿತ್ಯದಲ್ಲಿ ಕುವೆಂಪು, ದ.ರಾ.ಬೇಂದ್ರೆ, ಕಾರಂತರು, ಚೆನ್ನವೀರ ಕಣವಿ ಕೃಷಿ ಸಂಬಂಧಿತ ಸಾಹಿತ್ಯವನ್ನು ರಚಿಸಿದ್ದಾರೆ. ಕುವೆಂಪುರವರ ಹಲವಾರು ಕವಿತೆಗಳಲ್ಲಿ ಕೃಷಿಕರ ಜೊತೆಗೆ ಭಾವನಾತ್ಮಕ ಸಂಬಂಧವನ್ನು ಅಭಿವ್ಯಕ್ತ ಪಡಿಸಿದ್ದಾರೆ. ಮಲೆಗಳಲ್ಲಿ ಮದುಮಗಳು, ಕಾನೂರು ಸುಬ್ಬಮ್ಮ ಹೆಗ್ಗಡತಿ ನೇಗಿಲಯೋಗಿ ಕೃತಿಗಳು ಸಾಕ್ಷಿಕರಿಸುತ್ತವೆ. ರೈತನನ್ನು ದೇಶಕ್ಕೆ ಅನ್ನ ನೀಡುವ ನೇಗಿಲಯೋಗಿ ಎಂದು ವರ್ಣಿಸಿದ್ದಾರೆ.

ನಾಡೋಜ ಚೆನ್ನವೀರ ಕಣವಿ 'ಅನ್ನದ ಋಣ' ಪದ್ಯ ರೈತರ ಕುರಿತಾಗಿ ಬರೆದ ಪದ್ಯವಿದು.

ಬೆಳುವಲದ ಹೊಲದ ಉದ್ದಗಲ ಎತ್ತುಗೆ ಎತ್ತರಕ್ಕೆ

ನಿಂತು ಗರಿಗೆದರಿ–

ಹಾರಿ ಹೋಗುವುದಿಲ್ಲ ಆಕಾಶಕ್ಕೆ.

ಬಿರಿಸು ನೆಲದೆದೆಗೆ ಬೆವರಿಳಿಸಿ, ಹದಗೊಳಿಸಿ

ಬಿತ್ತಿ ಬೆಳೆದವನ ಕೈ

ಬಿಡುವುದಿಲ್ಲ.

ಎಂದು ಬೆಳೆ ಬೆಳೆಯುವ ಕಾಯಕ, ಅದರ ಸೌಂದರ್ಯ, ಬೆಳೆ ಹಂತಗಳ ಪರಿಚಯ, ವಿವಿಧ ಬೆಳೆ ಹಂತಗಳಲ್ಲಿ ಪ್ರಕೃತಿಯ ಸ್ಪಂದನದಿಂದ ಹಿಡಿದ ಒಕ್ಕಣೆ ಮಾಡಿ ನಮ್ಮ ತಟ್ಟೆಯಿಂದ ಒಡಲು ಸೇರುವ ಬಗೆ ಹಾಗೂ ಒಡಲಿಗೆ ಆಹಾರ ಸಿಗದವರ ನೋವುಗಳನ್ನು ಕಟ್ಟಿಕೊಡುತ್ತಾರೆ. ಆಹಾರ ಹಂಚಿ ಎಲ್ಲರ ಸೊತ್ತಾದ ಆಹಾರದ ಮೇಲೆ ಒಬ್ಬರ ಹಿಡಿತವನ್ನು ಧಿಕ್ಕರಿಸುತ್ತಾರೆ.

ಪ್ರಗತಿಶೀಲ ಸಾಹಿತ್ಯದಲ್ಲಿ ಬಸವರಾಜ ಕಟ್ಟಿಮನಿ, ನಿರಂಜನ ಅನೇಕ ಕವಿಗಳು, ಲೇಖಕರು ಕೃಷಿ ಸಾಹಿತ್ಯದ ಬಗೆಗೆ ಒಲವು ತೋರಿಸಿದ್ದಾರೆ. ನವ್ಯ ಕಾಲಘಟ್ಟದಲ್ಲಿ ಕೃಷಿಗೆ ಸಂಬಂಧಿಸಿದ ವ್ಯಾಪಕ ಕೃತಿಗಳು ಹೊರಬಂದಿವೆ. ಪಿ.ಲಂಕೇಶ ಅವರ ಅವ್ವ ಕೃತಿಯಲ್ಲಿ ತಾಯಿಯನ್ನು ಭೂತಾಯಿಗೆ ಹೋಲಿಕೆ ಮಾಡಿದಾರೆ. ದಲಿತ ಬಂಡಾಯ ಘಟ್ಟದಲ್ಲಿ ಡಾ.ರಾಮಚಂದ್ರ ಬರಗೂರ, ಡಾ.ಸಿದ್ಧಲಿಂಗಯ್ಯ ಇನ್ನಿತರು ಕೃಷಿ ಬದುಕಿನ ಬಗ್ಗೆ ಚಿತ್ರಿಸಿದ್ದಾರೆ.

ಪೂರ್ಣಪ್ರಮಾಣದಲ್ಲಿ ಕೃಷಿಶಾಸ್ತ್ರವನ್ನು ನಿರೂಪಿಸುವ ಗ್ರಂಥವೆಂದರೆ ಕೃಷಿಜ್ಞಾನ ಪ್ರದೀಪಿಕೆ. ಪ್ರದೀಕೆ ಎಂದರೆ ಅಭಿವೃದ್ಧಿ. ಕೃಷಿ ಅಭಿವೃದ್ಧಿಯನ್ನೇ ಕೇಂದ್ರವಾಗಿಟ್ಟುಕೊಂಡು ರಚಿತವಾದ ಗ್ರಂಥ. 1879 ರಲ್ಲಿ ರಚನೆಯಾಗಿದೆ. ಈ ಗ್ರಂಥವು ಘನಮಠೇಶ ಶ್ರೀ ನಾಗಭೂಷಣ ಶಿವಯೋಗಿಗಳ ಆರ್ಶೀವಾದಿಂದ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಬೆಕಿನಾಳ ಗ್ರಾಮದ ಸಿದ್ಧರಾಮಪ್ಪ ಕುನ್ನಾಳ ಅವರು ರಚಿಸಿದ್ದಾರೆ.

ಸ್ವಾತಂತ್ರ್ಯದ ನಂತರ ವಿಶ್ವವಿದ್ಯಾಲಯಗಳ ಉನ್ನತ ಶಿಕ್ಷಣದಲ್ಲಿ ಪಿಎಚ್.ಡಿ ವಿಷಯ ಭಾಗವಾಗಿ ಮೂರು ಅಧ್ಯಯನಗಳು ಮುಖ್ಯವಾಗಿವೆ. 1) ಎಂ.ಜಿ.ಈಶ್ವರಪ್ಪ ಅವರ 'ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ'. ಎಂ.ಜಿ.ಈಶ್ವರಪ್ಪನವರು ಕವಿರಾಜಮಾರ್ಗ, ವಡ್ಡಾರಾಧನೆ, ಪಂಪಭಾರತ, ಪಂಪರಾಮಾಣ, ವಚನಗಳು, ಸರ್ವಜ್ಞನ ತ್ರಿಪದಿಗಳು, ಕೀರ್ತನೆಗಳನ್ನು ಪರಾಮರ್ಶಿಸಿ ಅದರಲ್ಲಿಯ ಕೃಷಿಗೆ ಸಂಬಂಧಿಸಿದ ಅಂಶಗಳನ್ನು ಹೆಕ್ಕಿ ತಗೆದು ವಿಶ್ಲೇಷಿದ್ದಾರೆ. 2) ವಿ.ಶಿವಾನಂದ ಅವರ 'ಗುಲಬರ್ಗಾ ಜಿಲ್ಲೆಯ ಕೃಷಿ ಪದಗಳ ಭಾಷಿಕ ಅಧ್ಯಯನ' 3) ಎಚ್.ಎಸ್.ವಿರುಪಾಕ್ಷಪ್ಪ ಅವರ 'ಕನ್ನಡದಲ್ಲಿ ಕೃಷಿಶಾಸ್ತ್ರ ಸಾಹಿತ್ಯ' ಎಂಬ ಅಧ್ಯಯನಗಳು ಮುಖ್ಯವಾಗಿವೆ.

ಒಟ್ಟಾರೆಯಾಗಿ ಕನ್ನಡ ಸಾಹಿತ್ಯಕ್ಕೂ ಮತ್ತು ಕೃಷಿಗೂ ನಿಕಟವಾದ ಸಂಬಂಧವಿದೆ. ಇವೆರಡು ಒಂದೇ ನಾಣ್ಯದ ಎರಡು ಮುಖಗಳು. ಒಂದನ್ನು ಬಿಟ್ಟು ಇನ್ನೊಂದು ಇರುವುದಿಲ್ಲ. ಕನ್ನಡ ಸಾಹಿತ್ಯಕ್ಕೆ ಮೂಲ ನೆಲೆ ಕೃಷಿಯಾಗಿದೆ. ಸಾಹಿತ್ಯದ ಎಲ್ಲ ವಿಕಾಸಗಳು ಈ ಮಣ್ಣಿನಿಂದಲ್ಲೆ ಸಾಧ್ಯವಾಗುವುದು. ಮನುಷ್ಯ ಅನುಭವಿಸಿದ ಅನುಭವಗಳನ್ನು ಹೊರಹಾಕುವುದೇ ಸಾಹಿತ್ಯ. ಹೀಗಾಗಿ ಕೃಷಿ ನೇರವಾಗಿ ಸಾಹಿತ್ಯಕ್ಕೆ ಸಂಬಂಧಿಸಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

**ಪರಾಮರ್ಶನ ಗ್ರಂಥಗಳು**

1) ಸುವರ್ಣ ಸಾಹಿತ್ಯ ವಿಮರ್ಶೆ – ಸಂ ಎಚ್.ದುಂಡಪ್ಪ, ಬಿ.ಎನ್.ಸುಮಿತ್ರಾಬಾಯಿ
2) ಸುವರ್ಣ ವಿಚಾರ ಸಾಹಿತ್ಯ – ಸಂ ಡಾ.ಬಸವರಾಜ ಕಲ್ಗುಡಿ
3) ಹಣತೆಗೆ ಹನಿ ಎಣ್ಣೆ – ಡಾ. ತಾಳ್ತಜೆ ವಸಂತಕುಮಾರ
4) ಕನ್ನಡ ಸಾಹಿತ್ಯ ಚರಿತ್ರೆ – ರಂ ಶ್ರೀ ಮುಗಳಿ
5) ವಚನ ಕಮ್ಮಟ – ಸಂ ಮರುಳಸಿದ್ದಪ್ಪ